

# ‘ಸ್ವಾಮಿ ನೀನು.. ಶಾಶ್ವತ ನೀನು...

ಗಾನಯೋಗಿ ಗುರು
ಪುಟ್ಟರಾಜ ಗವಾಯಿಗಳು

**ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಬಳ್ಳಾರಿ ಮೂಲದ ಪಂ.ಡಿ. ಕುಮಾರದಾಸ್ ಮುಂಚೂಣಿಯಲ್ಲಿರುವ ಹೆಸರು. ಗದಗದ ವೀರೇಶ್ವರ ಪುಣ್ಯಾಶ್ರಮದಲ್ಲಿ ಸುಮಾರು 15 ವರ್ಷ ಸಂಗೀತಾಭ್ಯಾಸ ಮಾಡಿರುವ ಈ ಗಾಯಕ ಸ್ವರ ಸಂಯೋಜಿಸಿ ಹಾಡಿರುವ ‘ಕಡಲ ದಾಂಟಿದ ವೀರ ಹನುಮಾ’ ಧ್ವನಿಸಾಂದ್ರಿಕೆ ಇತ್ತೀಚೆಗೆ ಲೋಕಾರ್ಪಣೆಗೊಂಡಿದೆ.**

**■ ಉಮಾ ಅನಂತ್**

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಹಿರಿಯ ಗಾಯಕ ಪಂ. ಡಿ. ಕುಮಾರದಾಸ್ ಅವತ್ತು ಪ್ಲೆಸೆಂಟ್ ಮೂಡ್‌ನಲ್ಲಿದ್ದರು. ಅವರ ಪಾಂಡಿತ್ಯಪೂರ್ಣ ಗಾಯನ, ಸುರ್ ತಾನ್, ಆಕಾರ್ ತಾನ್‌ಗಳ ಪ್ರಸ್ತುತಿಯಲ್ಲಿ ವಿಭಿನ್ನತೆ, ಸಂಗೀತದ ಬಗ್ಗೆ ವಿದ್ವತ್‌ಪೂರ್ಣ ಸೋದಾಹರಣ ಭಾಷಣ... ಮುಂತಾದವುಗಳನ್ನು ನಾನು ಅನೇಕ ಬಾರಿ ಕೇಳಿದ್ದರಿಂದ ಸಹಜವಾಗಿಯೇ ಅವರ ಸಂಗೀತ ಜೀವನದ ಬಗ್ಗೆ ತಿಳಿಯುವ ಕೌತುಕ ಉಂಟಾಯಿತು. ಕುಗ್ರಾಮದ ಬಡ ಕುಟುಂಬದಿಂದ ಬಂದ ಕುಮಾರದಾಸ್ ಸಂಗೀತದಲ್ಲಿ ಯಶಸ್ಸಿನ ಮೆಟ್ಟಿಲನ್ನು ಏರುತ್ತಾ ಒಬ್ಬ ಪ್ರಬುದ್ಧ ಗಾಯಕನಾಗಿ ದೇಶಾದ್ಯಂತ ನೂರಾರು ಕಛೇರಿಗಳಿಂದ ಕೇಳುಗರ ಮನಗೆದ್ದವರು. ಅವರ ನಾದಜೀವನ ಪಯಣದ ಬಗ್ಗೆ ಕೇಳಿದಾಗ...

‘ಸ್ವಾಮಿ ನೀನು, ಶಾಶ್ವತ ನೀನು
ಎತ್ತಿದ ಬಿರುದ ಜಗವೆಲ್ಲ ಅರಿಯೆ...’

ಎಂಬ ಬಸವೇಶ್ವರರ ಸುಪ್ರಸಿದ್ಧ ವಚನವನ್ನು ಸುಶ್ರಾವ್ಯವಾಗಿ ಹಾಡಲಾರಂಭಿಸಿದರು. ಪಲ್ಲವಿಯ ಎರಡೇ ಎರಡು ಸಾಲುಗಳನ್ನು ಹಾಡಿದರು. ಅವರು ಈ ವಚನವನ್ನು ಹಾಡಲು ಕಾರಣವಿತ್ತು.

ಕುಮಾರದಾಸ್ ಗದಗದ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಗೀತ ಕಲಿಯುತ್ತಿದ್ದ ಸಮಯದಲ್ಲಿ ತೋಂಟದ ಸಿದ್ಧಲಿಂಗೇಶ್ವರ ಸ್ವಾಮಿಗಳ ಐದನೇ ಪುಣ್ಯತಿಥಿ ನಡೆದಿತ್ತು. ಆ ಪ್ರಯುಕ್ತ ನಡೆಸಿದ ಸಂಗೀತ ಸ್ಪರ್ಧೆಯಲ್ಲಿ ಇದೇ ವಚನ ಹಾಡಿ ಕುಮಾರದಾಸ್ ಪ್ರಥಮ ಬಹುಮಾನ ಪಡೆದಿದ್ದರು. ಸಂಗೀತ ದಿಗ್ಗಜರಾದ ಪಂ. ಮಾಧವ ಗುಡಿ, ಪಂ. ಸಿದ್ಧರಾಮ ಜಂಬಲದಿನ್ನಿ ಮೊದಲಾದವರು ತೀರ್ಪುಗಾರರಾಗಿದ್ದರು. ಐವತ್ತು ಮಂದಿ